ಆ) ಕಠಿಣಾತ್ಮಕ ಹಳ್ಳಿಗಳು. ಸವಳು ನೀರಿನ ಹಳ್ಳಿಗಳು :- ಈ ಹಳ್ಳಿಗಳಿಗೆ ಎಲ್ಲಾ ಕಾಲದಲ್ಲೂ ಶುದ್ಧವಾದ ಕುಡಿಯುವ ನೀರಿನ ಹೊಸ ಜಲಮೂಲವನ್ನು ಸ್ಥಾಪಿಸಲಾಗುತ್ತಿದೆ. ಅಂತ ಜಲಮೂಲವನ್ನು ಕಂಡುಹಿಡಿಯಲು ಭಾರತ ಸರ್ಕಾರದ ಕೇಂದ್ರ ಅಂರ್ತಜಲ ಮಂಡಳಿಯ ಮತಿಯಿಂದ ಸೇವೆ ಹಾಗೂ ಸಲಹೆಗಳನ್ನು ಪಡೆಯಲಾಗುತ್ತಿದೆ.

ನೀರಿನಲ್ಲಿ ಹಚ್ಚಿನ ಫ್ಲೋರೈಡ್‌ಅಂಶ ಇರುವ ಹಳ್ಳಿಗಳು :-

ಈ ಗುರುತಿಸಲಾದ ಹಳ್ಳಿಗಳಿಗೆ ಬದಲಿ ಜಲಮೂಲವನ್ನು ಸ್ಥಾಪಿಸಲಾಗಿದೆ. ಬದಲಿ ಜಲಮೂಲವನ್ನು ಸ್ಥಾಪಿಸಲಾಗದ ಹಳ್ಳಿಗಳಿಗೆ ಡಿಮ್ಯೊರಿಡೇಷನ್ ಕಿಪ್ಲಾಂಟ್‌ಗಳನ್ನು ತೆಗೆದುಕೊಳ್ಳಲಾಗಿದೆ.

ನಾರು ಹುಣ್ಣಿಗೆ ಈಡಾದ ಹಳ್ಳಿಗಳು :-

ನಾರು ಹುಣ್ಣಿನ ರೋಗಕ್ಕೆ ಈಡಾದ ಹಳ್ಳಿಗಳಿಗೆ ಸುರಕ್ಷಿತ ನೀರನ್ನು ಒದಗಿಸಿ ರೋಗರಹಿತ ಮೆಟ್ಟಿಲು ಬಾವಿಗಳನ್ನು (ಕಲ್ಯಾಣಿ) ಸೇದುವ ಬಾವಿಗಳಾಗಿ ಪರಿವರ್ತಿಸಲಾಗುತ್ತಿದೆ.

ಲೋಕೋಪಯೋಗಿ ಇಲಾಖೆಗೆ ನಿಗದಿ ಪಡಿಸಿದ ಆಯವ್ಯಯ ಅನುದಾನ

1070 (1457) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಾ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92ನೆ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಗೆ ನಿಗದಿ ಪಡಿಸಿದ ಆಯವ್ಯಯ ಅನುದಾನವೆಷ್ಟು: (ಜಿಲ್ಲಾವಾರು ವಿವರಗಳನ್ನು ಕೊಡುವುದು)

ಆ) ಹಣವನ್ನು ಯಾವ ರೀತಿ ಬಿಡುಗಡೆ ಮಾಡಲಾಗಿದೆ : (ಜಿಲ್ಲಾವಾರು ವಿವರಗಳನ್ನು ಕೊಡುವುದು)

ಇ) ಅನುದಾನವನ್ನು ಉಪಯೋಗಿಸಿರದ ಬಗ್ಗೆ ಕಾರಣಗಳೇನು?

ಶ್ರೀ ಜಿ.ಹೆಚ್.ಅಶ್ವತ್ಥ್‌ರೆಡ್ಡಿ (ಲೋಕೋಪಯೋಗಿ ಮಂತ್ರಿಯವರು) :

ಅ) ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳಿಗೆ ಜಿಲ್ಲಾವಾರು ಅನುದಾನ ನಿಗದಿ ಪಡಿಸುವುದಿಲ್ಲ. 1991-92ನೇ ಸಾಲಿನಲ್ಲಿ ಆಯವ್ಯಯದಲ್ಲಿ ನಿರ್ದೇಶನ ಮತ್ತು ಆಡಳಿತ ಯಂತ್ರ ಮತ್ತು ಸಾಮಗ್ರಿ ಕಾಮಗಾರಿಗಳು. ಹಾಗೂ ಇತರೇ ವೆಚ್ಚಗಳಿಗೆ ಯೋಜನೆ ಮತ್ತು ಯೋಜನೇತರ ಶೀರ್ಷಿಕೆಯಲ್ಲಿ ಒಟ್ಟಾರೆಯಾಗಿ ಕಟ್ಟಡಗಳ ಶೀರ್ಷಿಕೆಯಲ್ಲಿ 54.33 ಕೋಟಿ ರೂ.ಗಳನ್ನು ರಸ್ತೆ ಮತ್ತು ಸೇತುವೆಗಳ ಶೀರ್ಷಿಕೆಯಲ್ಲಿ ಒಟ್ಟಾರೆಯಾಗಿ 56.97 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಪ್ರತಿ ಜಿಲ್ಲೆಯಲ್ಲಿ ತೆಗೆದುಕೊಂಡಿರುವ ಲೋಕೋಪಯೋಗಿ ಇಲಾಖೆ ವಿಭಾಗದ ಕಾಮಗಾರಿಗಳಿಗೆ ನೀಡಿರುವ ಅನುದಾನ ಹಾಗೂ ಬಿಡುಗಡೆಯಾಗಿರುವ ಅನುದಾನದ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಆ) ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವನ್ನು ಪೂರ್ಣವಾಗಿ ಉಪಯೋಗಿಸಲಾಗುತ್ತದೆ. ಆದುದರಿಂದ ಅನುದಾನವನ್ನು ಉಪಯೋಗಿಸಿಲ್ಲದಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ANNEXURE TO UNSTARRED LAQ *1457

(Rs. in Lakhs)

Sl.. No.	Districts	1991-92 Budget grants PLAN & NONPLAN	
		Grants allocated for Buildings, Roads & Bridges	Funds released to Buildings, Roads & Bridges to end of Jan.92
	A. General Budget		
1.	Dharwad	626.11	484.75
2.	Uttara Kannad	433.39	342.66
3.	Belagaum	529.77	437.71
4.	Bijapur	483.13	305.41
5.	Gulbarga	482.34	317.04
6.	Bidar	171.52	153.91
7.	Bellary	366.54	351.55
8.	Raichur	365.96	291.33
9.	Bangalore	1410.27	1051.73
10.	Tumkur	325.13	189.56
11.	Kolar	278.17	277.06
12.	Mysore	441.36	342.71
13.	Mandya	365.62	258.75
14.	Shimoga	550.93	272.59
15.	Chitradurga	373.68	210.17
16.	Hassan	287.15	189.11
17.	Chickmagalur	407.33	158.17
18.	Dakshna Kannada	314.29	142.46
19.	Kodagu	182.00	83.74
	B. Hyderabad Karnataka Area Develop. Programme Roads		
1.	Bidar	135.00	
2.	Gulbarga	525.00	771.65
3.	Raichur	265.00	
4.	Bellary	200.00	